☎ಕಛೇರಿ: 08262 – 220712, 220424
ವೆಬ್‌ಸೈಟ್ : www.cudackm.com
ಇ-ಮೇಲ್ : cmr_cudackm@yahoo.in

# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಹಿರೇಮಗಳೂರು ವಸತಿ ಬಡಾವಣೆ ಒಂದನೇ ಹಂತ, ಹಿರೇಮಗಳೂರು-ಕಡೂರು ಬೈಪಾಸ್ ರಸ್ತೆ
ಕಲ್ಯಾಣ ನಗರ, ಚಿಕ್ಕಮಗಳೂರು-577102

ಕ್ರಮ ಸಂಖ್ಯೆ: ನಅಪ್ರಾಚಿ : ನಿ.ಬೇ.ಸ. : ಆಡಳಿತ : 02 : 2016-17 ದಿನಾಂಕ:01-03-2017.

## ::: ನಿವೇಶನಗಳ ಬೇಡಿಕೆ ಸಮೀಕ್ಷೆ :::

ಚಿಕ್ಕಮಗಳೂರು ನಗರದ ಕಡೂರು - ಮಂಗಳೂರು ರಾಜ್ಯ ಹೆದ್ದಾರಿ ರಸ್ತೆಯಿಂದ ಹಿರೇಕೊಳಲೆಗೆ ಹೋಗುವ ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಇಂದಾವರ ಗ್ರಾಮ ಸರ್ವೆ ನಂ. 34, 35, 41, 42, 43, 44, 45, 46, 47, 48, 49, 50, 51, 52, 56, 57, 58, 59, 60, 61, 62, 63, 65, 581 ಹಾಗೂ 582 ಉಪ್ಪಳ್ಳಿ ಗ್ರಾಮ ಸರ್ವೆ ನಂ. 19, 20 ಮತ್ತು 21 ರಲ್ಲಿನ ಸುಮಾರು 195 ಎಕರೆ ಪ್ರದೇಶದಲ್ಲಿ ರೂಪಿಸಲಾಗುತ್ತಿರುವ ವಸತಿ ನಿವೇಶನಗಳ ವಸತಿ ಯೋಜನೆಯನ್ನು ರೂಪಿಸಲು ಉದ್ದೇಶಿಸಲಾಗಿದೆ. ಪ್ರಸ್ತಾವಿತ ಜಾಗವು **ಮಲ್ಲಂದೂರು ಮುಖ್ಯ ರಸ್ತೆಯಿಂದ ಹಿರೇಕೊಳಲೆಗೆ ಹೋಗುವ ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ನಗರದಿಂದ ಸುಮಾರು 3.00 ಕಿ.ಮೀ ದೂರದಲ್ಲಿರುತ್ತದೆ**. ಪ್ರಸ್ತಾವಿತ ವಿನ್ಯಾಸದಲ್ಲಿ ವಿವಿಧ ಅಳತೆಯ ಒಟ್ಟು 2412 ನಿವೇಶನಗಳನ್ನು ರೂಪಿಸಲು ಉದ್ದೇಶಿಸಲಾಗಿದೆ. (ನಿವೇಶನ ಬಯಸುವವರಿಂದ) ನಿವೇಶನಾಸಕ್ತರಿಂದ ನಿವೇಶನಗಳ ಬೇಡಿಕೆಗಾಗಿ / ಸಮೀಕ್ಷೆಗಾಗಿ ಈ ಮುಂದಿನಂತೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಕಾಂಕ್ಷಿಗಳು ನೊಂದಣಿ ಮತ್ತು ಕಾರ್ಡ್ ಶುಲ್ಕವನ್ನು ಪಾವತಿಸಿ ನೊಂದಣಿ ಮಾಡಿಸಿಕೊಳ್ಳಲು ಕೋರಲಾಗಿದೆ. (ಈಗಾಗಲೇ ಕಾರ್ಡ್ ನೋಂದಾಯಿಸಿಕೊಂಡಿರುವವರು ಅರ್ಜಿ ಶುಲ್ಕ ಮಾತ್ರ ಪಾವತಿಸಿ ಅರ್ಜಿ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ).

| ಕ್ರ. ಸಂ. | ನಿವೇಶನದ ವಿಸ್ತೀರ್ಣ (ಮೀಟರ್‌ಗಳಲ್ಲಿ) | ನಿವೇಶನದ ವಿಸ್ತೀರ್ಣ (ಅಡಿಗಳಲ್ಲಿ) | ನೋಂದಣಿ ಶುಲ್ಕ (ಕಾರ್ಡ್ ಶುಲ್ಕ) | ಅರ್ಜಿ ಶುಲ್ಕ |
|---|---|---|---|---|
| 1 | 15.00 x 24.00 | 50' x 80' | ₹ 2000/- | ₹ 50/- |
| 2 | 12.00 x 18.00 | 40' x 60' | ₹ 500/- | ₹ 50/- |
| 3 | 9.00 x 15.00 | 30' x 50' | ₹ 500/- | ₹ 50/- |
| 4 | 9.00 x 12.00 | 30' x 40' | ₹ 500/- | ₹ 50/- |
| 5 | 6.00 x 9.00 | 20' x 30' | ₹ 100/- | ₹ 50/- |

ನಿವೇಶನ ಆಕಾಂಕ್ಷಿಗಳು ಮೇಲಿನ ಪಟ್ಟಿಯಲ್ಲಿ ಹೇಳಿರುವಂತೆ, ನೋಂದಣಿ ಮತ್ತು ಕಾರ್ಡ್ ಶುಲ್ಕವನ್ನು ದಿನಾಂಕ:06-01-2017 ರಿಂದ 28-04-2017 ರೊಳಗಾಗಿ **ಕೋಟಕ್ ಮಹೀಂದ್ರ ಬ್ಯಾಂಕ್, ಎಂ. ಜಿ. ರಸ್ತೆ / ಇಂಡಿಯನ್ ಬ್ಯಾಂಕ್ ಎಂ. ಜಿ. ರಸ್ತೆ / ಕೆನರಾ ಬ್ಯಾಂಕ್ ಕಲ್ಯಾಣನಗರ ಶಾಖೆ / ಆಕ್ಸಿಸ್ ಬ್ಯಾಂಕ್ ಬಸವನಹಳ್ಳಿ ಮುಖ್ಯ ರಸ್ತೆ ಶಾಖೆ** ಚಿಕ್ಕಮಗಳೂರು (ಯಾವುದಾದರು ಒಂದು ಬ್ಯಾಂಕಿನಲ್ಲಿ) ಇಲ್ಲಿ ಪಾವತಿಸಿ ನೋಂದಣಿ ಮಾಡಿಸಿಕೊಳ್ಳಲು ಕೋರಿದೆ. 6.00 x 9.00 ಮೀಟರ್ (20 x 30 ಅಡಿ) ಅಳತೆಯ ನಿವೇಶನಕ್ಕೆ ವಾರ್ಷಿಕ ₹ 17000/- (ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 225 : ಬೆಂರೂಪ್ರಾ : 2012, ದಿನಾಂಕ:08-01-2013) ಕ್ಕಿಂತ ಕಡಿಮೆ ಆದಾಯ ಇರುವವರು ಮಾತ್ರ ಅರ್ಜಿ ಸಲ್ಲಿಸಬಹುದಾಗಿರುತ್ತದೆ, ಮತ್ತು 6.00 x 9.00 ಮೀಟರ್ ಅಳತೆಯ ನಿವೇಶನಕ್ಕೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ನೋಂದಣಿ ಶುಲ್ಕ ₹ 50.00 + 10.00 ಆಗಿರುತ್ತದೆ. ನೋಂದಣಿ ಶುಲ್ಕವನ್ನು ಯಾವುದೇ ಕಾರಣಕ್ಕೂ ವಾಪಸ್ಸು ಹಿಂದಿರುಗಿಸುವುದಿಲ್ಲ ಮತ್ತು ನಿವೇಶನದ ಬೆಲೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ನಿವೇಶನದ ಬೆಲೆಯು ಚದುರ ಮೀಟರಿಗೆ ರೂ. 7102/- (**ಚದುರ ಅಡಿಗೆ ರೂ.660/-**) ನಿಗದಿಪಡಿಸಲಾಗಿದೆ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ 6.00 x 9.00 ಮೀಟರ್ (20 x 30 ಅಡಿ) ಅಳತೆಯ ನಿವೇಶನಕ್ಕೆ ವಾರ್ಷಿಕ ಆದಾಯ ಕಡಿಮೆ ಇರುವವರಿಗೆ ಶೇಕಡ 50 ರಷ್ಟು ರಿಯಾಯಿತಿ ಇರುತ್ತದೆ. ನಿವೇಶನಾಕಾಂಕ್ಷಿಗಳು ಬಯಸುವ ನಿವೇಶನದ ಶೇಕಡ 10 ರಷ್ಟು ಶುಲ್ಕವನ್ನು ಪಾವತಿಸಿದಲ್ಲಿ ತಮ್ಮ ನಿವೇಶನವನ್ನು ಖಾತರಿಪಡಿಸಿಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪ್ರಾಧಿಕಾರದ ಕಛೇರಿಯಲ್ಲಿ ಮತ್ತು ವೆಬ್‌ಸೈಟ್ **www.cudackm.com** ನಲ್ಲಿ ಪಡೆಯಬಹುದಾಗಿರುತ್ತದೆ.

(ಟಿ. ಆರ್. ಭೀಮನೀಡ)
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

(ಸಯ್ಯದ್ ಹನೀಫ್)
ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು